**<u>ಪ್ರಮಾಣ ವಚನ ಬೋಧಿಸಿದ ದಿನಾಂಕಃ 05.07.2024</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

7. 2-3 ದಿನಗಳ ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆಸಿರುತ್ತಾರೆ. ಸಾಕ್ಷಿ ಜೆ.ಸಿ ಯಲ್ಲಿರುವ ಆರೋಪಿಯನ್ನು ವಿಸಿ ಮುಖಾಂತರ ನೋಡಿ, ಆತನನ್ನು ಪೊಲೀಸರು ತೋರಿಸಿರುತ್ತಾರೆ ಮತ್ತು ಆತನೇ ನನ್ನ ಹೆಂಡತಿಯನ್ನು ಖತಂ ಮಾಡಿರುತ್ತಾನೆ ಎಂದು ಹೇಳುತ್ತಾರೆ. ನಂತರ ಪೊಲೀಸರು ಆರೋಪಿಯನ್ನು ನಮ್ಮ ಮನೆಯ ಬಳಿಗೆ ಕರೆದುಕೊಂಡು ಬರುವುದಾಗಿ ಹೇಳಿರುತ್ತಾರೆ. ನಂತರ ಠಾಣೆಯಿಂದ ಆರೋಪಿಯನ್ನು ಮತ್ತು ನಮ್ಮನ್ನು ಕರೆದುಕೊಂಡು ಪೊಲೀಸರು ನಮ್ಮ ಮನೆಯ ಬಳಿಗೆ ಅವರ ವಾಹನದಲ್ಲಿ ಕರೆದುಕೊಂಡು ಬಂದಿರುತ್ತಾರೆ. ನಮ್ಮೊಂದಿಗೆ ಬೇರೆ ಯಾರು ಇದ್ದರು ಅವರು ಯಾರು ಎಂದು ಗೊತ್ತಿಲ್ಲ. ಪೊಲೀಸರು ಸ್ಥಳಕ್ಕೆ ಬಂದಾಗ ನನ್ನ ಪತ್ನಿಯ ಶವ ಬಿದ್ದ ಸ್ಥಳವನ್ನು ತೋರಿಸಿರುತ್ತೇನೆ. ಪೊಲೀಸರು ಸ್ಥಳದಿಂದ ಬೆಡ್‌ಶೀಟ್, ಚಾಕು, ದಿಂಬು ಮುಂತಾದವುಗಳನ್ನು ತೆಗೆದುಕೊಂಡು ಬಂದಿರುತ್ತಾರೆ. ಪೊಲೀಸರು ಈ ಬಗ್ಗೆ ಬರೆದುಕೊಂಡು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸುತ್ತಾರೆ. ಸದರಿ ದಾಖಲೆಯನ್ನು ನಿಶಾನೆ ಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-8(ಎ) ಎಂದು ಗುರುತಿಸಲಾಯಿತು. ನನ್ನ ಜೊತೆಗೆ ಯಾರೋ ಇಬ್ಬರು ಸಹಿ ಮಾಡಿರುತ್ತಾರೆ. ಅವರು ಯಾರು ಎಂದು ನನಗೆ ಗೊತ್ತಿಲ್ಲ. ಆಗ ಸಮಯ ಹಗಲು ಹೊತ್ತು ಆಗಿತ್ತು. ಪೊಲೀಸರು ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಸದರಿ ಭಾವಚಿತ್ರಗಳನ್ನು ನಿಶಾನೆ ಪಿ-9 ರಿಂದ 23 ಎಂದು ಗುರುತಿಸಲಾಯಿತು. ಪೊಲೀಸರು ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಒಂದು ಪಿಂಕ್ ಬಣ್ಣದ ದುಪ್ಪಟ್ಟನ್ನು ನೋಡುತ್ತಿದ್ದು, ಅದನ್ನು ಮುದ್ದೆಮಾಲು-1 ಎಂದು, ಒಂದು ತಲೆ ದಿಂಬು ನೋಡುತ್ತಿದ್ದು, ಅದನ್ನು ಮುದ್ದೆಮಾಲು-2 ಎಂದು, ಒಂದು ತಲೆ ದಿಂಬಿನ ಕವರ್ ನ್ನು ನೋಡುತ್ತಿದ್ದು, ಅದನ್ನು ಮುದ್ದೆಮಾಲು-3 ಎಂದು, ಒಂದು ತಲೆ ದಿಂಬು ನೋಡುತ್ತಿದ್ದು, ಅದನ್ನು ಮುದ್ದೆಮಾಲು-4 ಎಂದು, ಒಂದು ಬೆಡ್ ಶೀಟ್ ನ್ನು ನೋಡುತ್ತಿದ್ದು, ಅದನ್ನು

ಮುದ್ದೆಮಾಲು-5 ಎಂದು, ಒಂದು ಹಾಸಿಗೆಯ ತುಂಡಾದ ಭಾಗ ನೋಡುತ್ತಿದ್ದು, ಅದನ್ನು ಮುದ್ದೆಮಾಲು-6 ಎಂದು, ಒಂದು ಬ್ಲಾಂಕೇಟ್ ನ್ನು ನೋಡುತ್ತಿದ್ದು, ಅದನ್ನು ಮುದ್ದೆಮಾಲು-7 ಎಂದು, ಒಂದು ಚಾಕು ನೋಡುತ್ತಿದ್ದು, ಅದನ್ನು ಮುದ್ದೆಮಾಲು-8 ಎಂದು, ಒಂದು ಚಾಕು ನೋಡುತ್ತಿದ್ದು, ಅದನ್ನು ಮುದ್ದೆಮಾಲು-9 ಎಂದು ಗುರುತಿಸಲಾಯಿತು. (ಸದರಿ ವಸ್ತುಗಳನ್ನು ಪ್ರತ್ಯೇಕವಾದ ಬಿಳಿ ಬಟ್ಟೆಯಲ್ಲಿ ಸೀಲು ಮಾಡಿದ್ದು, ಅವುಗಳನ್ನು ಸರ್ಕಾರಿ ಅಭಿಯೋಜಕರ ಮನವಿ ಮೇರೆಗೆ, ಸೀಲ್ ನ್ನು ಒಡೆದು ಸಾಕ್ಷಿಗೆ ತೋರಿಸಿ ನಂತರ ಮುದ್ದೆಮಾಲಾಗಿ ಗುರುತಿಸಲಾಯಿತು.) ನಾನು ಪೊಲೀಸರ ಮುಂದೆ ನನ್ನ ಮರುಹೇಳಿಕೆಯನ್ನು ನೋಡಿರುತ್ತೇನೆ. ಆ ದಿನ ಪೊಲೀಸ್ ಠಾಣೆಯಲ್ಲಿ ತೋರಿಸಿದ ವ್ಯಕ್ತಿ ಈ ದಿನ ನ್ಯಾಯಾಲಯದಲ್ಲಿದ್ದಾನೆ. ಸಾಕ್ಷಿ ವಿಸಿ ಮುಖಾಂತರ ಹಾಜರುಪಡಿಸಿದ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ-ಸವಾಲುಃ ಶ್ರೀ ವಿ.ಎಮ್.ಎನ್ Chief Legal Aid Defense ವಕೀಲರಿಂದ ಆರೋಪಿಯ ಪರವಾಗಿಃ**

ಆರೋಪಿ ಪರ ವಕೀಲರು ಪಾಟೀ-ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ, ಪಾಟೀ-ಸವಾಲನ್ನು ಮುಂದೂಡಲಾಯಿತು.

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ಶ್ರೀ. ದೇವಾನಂದ)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.